## ದಿನಾಂಕ: 13.10.2025 ರಂದು ನಡೆದ 51ನೇಯ ಹಣಕಾಸು ಸಮಿತಿ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 51ನೇಯ ಹಣಕಾಸು ಸಮಿತಿಯ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ:13.10.2025 ರಂದು ಸೋಮವಾರ ಬೆಳಗ್ಗೆ 11:00ಕ್ಕೆ ನಡೆಯಿತು.

ಈ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳು:

1. ಡಾ. ಎಸ್ ಅಹಲ್ಯ, ಮಾನ್ಯ ಕುಲಪತಿಗಳು, ಕಸಂವಿ — ಅಧ್ಯಕ್ಷರು
2. ಪ್ರೊ. ವಿ ಗಿರೀಶ್‌ಚಂದ್ರ, ಕುಲಸಚಿವರು, ಕಸಂವಿ — ಸದಸ್ಯರು
3. ಶ್ರೀಮತಿ ಉಮಾ ಕೆ, ಜಂಟಿ ಕಾರ್ಯದರ್ಶಿಗಳು
   ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ — ಸದಸ್ಯರು
4. ಶ್ರೀ. ಕುಮಾರ ಎನ್,
   ಉಪ ಕಾರ್ಯದರ್ಶಿ, (ತಾಂತ್ರಿಕ ಶಿಕ್ಷಣ ಹಾಗೂ ಯೋಜನೆ)
   ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು — ಸದಸ್ಯರು
5. ಪ್ರೊ. ವಿ ಗಿರೀಶ್‌ಚಂದ್ರ, ಡೀನ್, ಕಸಂವಿ — ಸದಸ್ಯರು
6. ಶ್ರೀಮತಿ ಶೃತಿ ಐ., ಹಣಕಾಸು ಅಧಿಕಾರಿಗಳು, ಕಸಂವಿ — ಸದಸ್ಯ ಕಾರ್ಯದರ್ಶಿ

ಹಾಜರಿದ್ದ ಸದಸ್ಯರುಗಳನ್ನು ಅಧ್ಯಕ್ಷರ ಅಪ್ಪಣೆಯ ಮೇರೆಗೆ ಸ್ವಾಗತಿಸುತ್ತಾ, ಈ ಕೆಳಕಂಡ ಕಾರ್ಯಸೂಚಿಗಳು ಮಂಡಿತವಾಗಿ ನಿರ್ಣಯಗೊಂಡವು.

| | |
|---|---|
| ವಿಷಯ 1 | 50ನೇ ಹಣಕಾಸು ಸಮಿತಿ ಸಭೆಯ ನಡಾವಳಿಯನ್ನು ಸ್ಥಿರೀಕರಿಸುವ ಬಗೆಗೆ. |
| ಟಿಪ್ಪಣಿ | ದಿನಾಂಕ:28.07.2025ರ ನಡಾವಳಿಯನ್ನು ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | ಸ್ಥಿರೀಕರಿಸಿತು. |
| ವಿಷಯ 2 | 50ನೇ ಸಭೆಯ ನಡಾವಳಿಯ ಅನುಪಾಲನಾ ವರದಿಯನ್ನು ಅನುಮೋದಿಸುವ ಬಗೆಗೆ. |
| ಟಿಪ್ಪಣಿ | 50ನೇ ಸಭೆಯ ಅನುಪಾಲನಾ ವರದಿಯನ್ನು ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | ಅನುಮೋದಿಸಿತು. |
| ವಿಷಯ 3 | ಏಪ್ರಿಲ್–2025 ರಿಂದ ಆಗಸ್ಟ್–2025ರವರೆಗಿನ ಐದು ತಿಂಗಳ ಜಮಾ–ಖರ್ಚು ತಃಖ್ತೆಯನ್ನು ಅನುಮೋದಿಸುವ ಬಗೆಗೆ. |
| ಟಿಪ್ಪಣಿ | ಏಪ್ರಿಲ್, ಮೇ, ಜೂನ್, ಜುಲೈ ಮತ್ತು ಆಗಸ್ಟ್–2025 ರವರೆಗಿನ ಐದು ತಿಂಗಳ ಜಮಾ–ಖರ್ಚು ತಃಖ್ತೆಯನ್ನು ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | ಅನುಮೋದಿಸಿತು. |
| ವಿಷಯ 4 | ಕರ್ನಾಟಕ ಬ್ಯಾಂಕ್‌ನಿಂದ ಮುದ್ರಣಕ್ಕಾಗಿ ಸಿಎಸ್‌ಆರ್ ಫಂಡ್ ರೂ. 15ಲಕ್ಷ ಮಂಜೂರಾಗಿದ್ದು, ಪ್ರಕ್ರಿಯೆ ಕೈಗೊಳ್ಳುವ ಬಗ್ಗೆ. |
| ಟಿಪ್ಪಣಿ | ದಿನಾಂಕ:29.09.2025ರ ಕರ್ನಾಟಕ ಬ್ಯಾಂಕ್‌ನ ಪತ್ರದಲ್ಲಿ ಮುದ್ರಣಕ್ಕಾಗಿ ಸಿಎಸ್‌ಆರ್ ಫಂಡ್ ರೂ. 15ಲಕ್ಷ ಮಂಜೂರು ಮಾಡಿ ವೆಂಡರ್ ಅಥವಾ ಪ್ರಿಂಟರ್‌ನ್ನು ಸೂಚಿಸಲು ಕೋರಿರುತ್ತಾರೆ. ಈ ಬಗ್ಗೆ ಮುಂದಿನ ಪ್ರಕ್ರಿಯೆಗಳನ್ನು ಕೈಗೊಳ್ಳಲು ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | ನಿಯಮಾನುಸಾರ ಪ್ರಕ್ರಿಯೆ ಕೈಗೊಳ್ಳಲು ಸಭೆಯು ಅನುಮೋದಿಸಿತು. |

| | |
|---|---|
| ವಿಷಯ 5 | ಕಾಗದ ಪತ್ರ ಸಮಿತಿಯಲ್ಲಿ ಮಂಡನೆಯಾದ ರಾಜ್ಯ ಲೆಕ್ಕ ಪರಿಶೋಧನಾ ವಸೂಲಾತಿ ಮತ್ತು ಆಕ್ಷೇಪಣೆಗಳಿಗೆ ಹಾಗೂ ಆಕ್ಷೇಪಣೆಗಳ ತೀರುವಳಿಗಾಗಿ ಇದಕ್ಕೆ ಸಂಬಂಧಿಸಿದ ನಿವೃತ್ತ 02 ತಜ್ಞರನ್ನು ತಾತ್ಕಾಲಿಕವಾಗಿ ನೇಮಿಸಿಕೊಂಡು ಇವರಿಬ್ಬರಿಗೆ ಗೌರವ ಧನ ನಿಗದಿ ಪಡಿಸುವ ಬಗ್ಗೆ. |
| ಟಿಪ್ಪಣಿ | 2008-09ರಿಂದ 2023-24ರವರೆಗೆ ರಾಜ್ಯ ಲೆಕ್ಕ ಪರಿಶೋಧನೆಯ ವಸೂಲಾತಿ ಮತ್ತು ಆಕ್ಷೇಪಣೆಗಳ ಬಗ್ಗೆ ಕಾಗದ ಪತ್ರ ಸಮಿತಿಯಲ್ಲಿ ಚರ್ಚೆಯಾಗಿದ್ದು, ಇವುಗಳನ್ನು ತೀರುವಳಿ ಮಾಡಲು ಹಾಗೂ CAG ಪ್ಯಾರಾಗಳಿಗೆ ಉತ್ತರಿಸಲು ಅನುಭವವುಳ್ಳ 02 ನಿವೃತ್ತ ತಜ್ಞರನ್ನು ತಾತ್ಕಾಲಿಕವಾಗಿ ನೇಮಿಸಿಕೊಂಡು ಇವರಿಬ್ಬರಿಗೆ ಗೌರವ ಧನ ನಿಗಧಿ ಪಡಿಸಲು ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | ಇಬ್ಬರು ನಿವೃತ್ತ ತಜ್ಞರನ್ನು 03 ತಿಂಗಳ ಅವಧಿಗೆ ನೇಮಿಸಿಕೊಳ್ಳಲು ಮತ್ತು ಮಾಸಿಕ ರೂ.35,000/- ರಿಂದ ರೂ.40,000/- ಗಳನ್ನು ಗೌರವ ಸಂಭಾವನೆ ನೀಡಲು ಸಭೆಯು ಅನುಮೋದಿಸಿತು. |
| ವಿಷಯ 6 | ಕರ್ನಾಟಕದ ಏಕೈಕ ಸಂಸ್ಕೃತ ದಿನಪತ್ರಿಕೆ 'ಸುಧರ್ಮ' ಇದಕ್ಕೆ ಜಾಹೀರಾತು ಶುಲ್ಕ ನೀಡುವ ಬಗ್ಗೆ. |
| ಟಿಪ್ಪಣಿ | ಕರ್ನಾಟಕದ ಏಕೈಕ ಸಂಸ್ಕೃತ ದಿನಪತ್ರಿಕೆ 'ಸುಧರ್ಮ' ಪ್ರತಿ ವರ್ಷ ರೂ.10,000/- ಜಾಹೀರಾತು ಶುಲ್ಕ ನೀಡುತ್ತಿದ್ದು, ಈ ವರ್ಷ ರೂ.25,000/- ನೀಡಲು ಮನವಿ ಸಲ್ಲಿಸಿರುತ್ತಾರೆ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | ಸುಧರ್ಮ ದಿನ ಪತ್ರಿಕೆಗೆ ಜಾಹೀರಾತು ಶುಲ್ಕ ರೂ.25,000/-ಗಳನ್ನು ನೀಡಲು ಸಭೆಯು ಅನುಮೋದನೆ ನೀಡಿತು. |
| ವಿಷಯ 7 | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಎಂ.ಫಿಲ್ ವ್ಯಾಸಂಗ ಮಾಡಿರುವ ವಿದ್ಯಾರ್ಥಿಗಳ ಲಘು ವಿದ್ಯಾವಾರಿಧಿ ಶೋಧ ಪ್ರಬಂಧದ ಮುದ್ರಣಕ್ಕೆ ಅನುಮತಿ ನೀಡಿ ಶುಲ್ಕ ನಿಗಧಿಪಡಿಸುವ ಬಗ್ಗೆ. |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಎಂ.ಫಿಲ್ ವ್ಯಾಸಂಗ ಮಾಡಿರುವ ವಿದ್ಯಾರ್ಥಿಗಳ ಲಘು ವಿದ್ಯಾವಾರಿಧಿ ಶೋಧ ಪ್ರಬಂಧದ ಮುದ್ರಣಕ್ಕೆ ಅನುಮತಿ ನೀಡಿ, ಶುಲ್ಕ ರೂ.2000/- ನಿಗಧಿ ಪಡಿಸ ಕುಲಸಚಿವರು(ಮೌಲ್ಯಮಾಪನ) ಮನವಿ ಸಲ್ಲಿಸಿರುವನ್ವಯ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | ಎಂ.ಫಿಲ್ ವ್ಯಾಸಂಗ ಮಾಡಿರುವ ವಿದ್ಯಾರ್ಥಿಗಳ ಲಘು ವಿದ್ಯಾವಾರಿಧಿ ಶೋಧ ಪ್ರಬಂಧದ ಮುದ್ರಣಕ್ಕೆ ಅನುಮತಿ ನೀಡಿ, ಶುಲ್ಕ ರೂ.2000/- ನಿಗಧಿ ಪಡಿಸಲು ಸಭೆಯು ಅನುಮೋದಿಸಿತು. |
| ವಿಷಯ 8 | ಅನುದಾನಿತ ಸಂಸ್ಕೃತ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಯುಜಿಸಿ ನಿಗದಿಪಡಿಸಿದ ವಿದ್ಯಾರ್ಹತೆ ಹೊಂದಿರುವ ಬೋಧಕರುಗಳಿಗೆ ಯುಜಿಸಿ ವೇತನ ಶ್ರೇಣಿಯನ್ನು ವಿಸ್ತರಿಸುವ ಬಗ್ಗೆ. |
| ಟಿಪ್ಪಣಿ | ಅನುದಾನಿತ ಸಂಸ್ಕೃತ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಯುಜಿಸಿ ನಿಗದಿಪಡಿಸಿದ ವಿದ್ಯಾರ್ಹತೆ ಹೊಂದಿರುವ ಬೋಧಕರುಗಳಿಗೆ ಯುಜಿಸಿ ವೇತನ ಶ್ರೇಣಿಯನ್ನು ವಿಸ್ತರಿಸಲು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯನ್ನು ಸ್ಥಿರೀಕರಣಗೊಳಿಸಲು ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | ಸಭೆಯು ಸ್ಥಿರೀಕರಿಸಿತು. |
| ವಿಷಯ 9 | 50ನೇ ಹಣಕಾಸು ಸಮಿತಿಯ ವಿಷಯ ಸಂಖ್ಯೆ:22ರ ವೃಂದ ಮತ್ತು ನೇಮಕಾತಿ ಪರಿನಿಯಮದಲ್ಲಿಯಿರುವ ಕಂಪ್ಯೂಟರ್ ಪ್ರೋಗ್ರಾಮರ್, ಶೀಘ್ರ ಲಿಪಿಗಾರ ಹಾಗೂ ಕುಲಪತಿಗಳ ಆಪ್ತ ಕಾರ್ಯದರ್ಶಿ ಈ 03 ಹುದ್ದೆಗಳ ನೇರ ನೇಮಕಾತಿಗೆ ವೃಂದ ಮತ್ತು ನೇಮಕಾತಿ ಪರಿನಿಯಮವನ್ನು ಮರು ಪರಿಷ್ಕರಣೆ ಮಾಡಿರುವುದನ್ನು ಸರ್ಕಾರದ ಅನುಮೋದನೆಗೆ ಸಲ್ಲಿಸುವ ಬಗೆಗೆ. |
| ಟಿಪ್ಪಣಿ | 2012ರಲ್ಲಿ ವೃಂದ ಮತ್ತು ನೇಮಕಾತಿ ಪರಿನಿಯಮ ಸರ್ಕಾರದಿಂದ ಅನುಮೋದನೆಗೊಂಡಿರುತ್ತದೆ. ಈ ವೃಂದ ಮತ್ತು ನೇಮಕಾತಿ ಪರಿನಿಯಮದಲ್ಲಿಯಿರುವ ಕೆಲವು ನೇಮಕಾತಿ ಮಾನದಂಡಗಳನ್ನು ವಿಶ್ವವಿದ್ಯಾಲಯದ ಅಭಿವೃದ್ಧಿ ಹಾಗೂ ಆಡಳಿತದ ದೃಷ್ಟಿಯಿಂದ ಆಡಳಿತ ಮತ್ತು ತಾಂತ್ರಿಕ ಕಾರ್ಯಗಳ ಸುಗಮ ನಿರ್ವಹಣೆಗಾಗಿ ಹಾಗೂ ಆನ್ ಲೈನ್ ಸಭೆಗಳು, ಇ-ಆಡಳಿತ ಯೋಜನೆಗಳು, ರಾಷ್ಟ್ರೀಯ ಪೋರ್ಟಲ್‌ಗಳ ಸುಗಮ ನಿರ್ವಹಣೆಗಾಗಿ ಈ ಹುದ್ದೆಗಳು ಅತ್ಯಾವಶ್ಯಕವಾಗಿವೆ. ಪ್ರಸ್ತುತ ಒಬ್ಬ ಕಂಪ್ಯೂಟರ್ ಆಪರೇಟರ್‌ನಿಂದ ಎಲ್ಲಾ ತಾಂತ್ರಿಕ ಜವಾಬ್ದಾರಿಗಳನ್ನು ನಿರ್ವಹಿಸುವುದು ಕಷ್ಟಕರವಾಗಿರುವುರಿಂದ ಈ ಹುದ್ದೆಗಳು ವಿಶ್ವವಿದ್ಯಾಲಯದ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಕಾರ್ಯಗಳಲ್ಲಿ ಸಹಕಾರಿಯಾಗಲಿವೆ. ಆದ್ದರಿಂದ ಕಂಪ್ಯೂಟರ್ ಪ್ರೋಗ್ರಾಮರ್, ಶೀಘ್ರ ಲಿಪಿಗಾರರು ಹಾಗೂ ಕುಲಪತಿಗಳ ಆಪ್ತ ಕಾರ್ಯದರ್ಶಿ ಈ ಮೂರು ಹುದ್ದೆಗಳನ್ನು ನೇರ ನೇಮಕಾತಿಗಾಗಿ ವೃಂದ ಮತ್ತು ನೇಮಕಾತಿ ಪರಿನಿಯಮವನ್ನು ಪರಿಷ್ಕರಿಸಲಾಗಿದ್ದು, ಸದರಿ ಪ್ರಸ್ತಾವನೆಯನ್ನು ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲು ವಿಷಯವನ್ನು ಸಭೆಯ ಮುಂದೆ ಮಂಡಿಸಿದೆ. |

ಪ್ರಸ್ತುತ ಅಸ್ತಿತ್ವದಲ್ಲಿರುವುದು:

| ಕ್ರಮ ಸಂಖ್ಯೆ | ಹೆಸರು, ಪದನಾಮ, ವೇತನ ಶ್ರೇಣಿ | ಮಂಜೂರಾದ ಹುದ್ದೆಗಳು | ನೇಮಕಾತಿ ವಿಧಾನ | ಕನಿಷ್ಠ ಅರ್ಹತೆ |
|---|---|---|---|---|
| 1 | ಕುಲಪತಿಗಳ ಆಪ್ತ ಕಾರ್ಯದರ್ಶಿ ರೂ.14050–25050 | 01 | ಸಂಸ್ಕೃತ ವಿಶ್ವವಿದ್ಯಾಲಯದ ಸಹಾಯಕ ಕುಲಸಚಿವರ ಕೇಡರ್‌ನಿಂದ ನೇಮಕ ಮಾಡುವುದು | |

ಉದ್ದೇಶಿತ:

| ಕ್ರಮ ಸಂಖ್ಯೆ | ಹೆಸರು, ಪದನಾಮ, ವೇತನ ಶ್ರೇಣಿ | ಮಂಜೂರಾದ ಹುದ್ದೆಗಳು | ನೇಮಕಾತಿ ವಿಧಾನ | ಕನಿಷ್ಠ ಅರ್ಹತೆ |
|---|---|---|---|---|
| 1 | ಕುಲಪತಿಗಳ ಆಪ್ತ ಕಾರ್ಯದರ್ಶಿ ರೂ.83700–155200 | 01 | ನೇರ ನೇಮಕಾತಿ | 1. ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿ ಪಡೆದಿರಬೇಕು<br>2. ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಸಂಸ್ಕೃತದಲ್ಲಿ ಯಾವುದೇ ಕೋರ್ಸ್ ಪೂರ್ಣಗೊಳಿಸಿರಬೇಕು<br>3. ಕನಿಷ್ಠ 3 ವರ್ಷಗಳ ಸಂಬಂಧಪಟ್ಟ ಅನುಭವವನ್ನು ಹೊಂದಿರಬೇಕು |

ಪ್ರಸ್ತುತ ಅಸ್ತಿತ್ವದಲ್ಲಿರುವುದು:

| ಕ್ರಮ ಸಂಖ್ಯೆ | ಹೆಸರು, ಪದನಾಮ, ವೇತನ ಶ್ರೇಣಿ | ಮಂಜೂರಾದ ಹುದ್ದೆಗಳು | ನೇಮಕಾತಿ ವಿಧಾನ | ಕನಿಷ್ಠ ಅರ್ಹತೆ |
|---|---|---|---|---|
| 1 | ಕಂಪ್ಯೂಟರ್ ಪ್ರೋಗ್ರಾಮರ್ ರೂ.14050–25050 | 01 | ಶೀಘ್ರಲಿಪಿಗಾರರ ಕೇಡರ್‌ನಿಂದ ಬಡ್ತಿಯ ಮೂಲಕ. ಒಂದು ವೇಳೆ ಅರ್ಹ ಅಭ್ಯರ್ಥಿಗಳು ಬಡ್ತಿಗೆ ಲಭ್ಯವಿಲ್ಲದಿದ್ದರೆ, ನೇರ ನೇಮಕಾತಿಯ ಮೂಲಕ | ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಪದವಿ ಪಡೆದಿರಬೇಕು ಮತ್ತು ಶೀಘ್ರಲಿಪಿಗಾರರ ಹುದ್ದೆಯಲ್ಲಿ ಕನಿಷ್ಠ 5 ವರ್ಷಗಳ ಸೇವೆಯನ್ನು ಹೊಂದಿರಬೇಕು ಮತ್ತು ಯಾವುದೇ ವಿಶೇಷ ಕ್ಷೇತ್ರದಲ್ಲಿ ಸಾಂಪ್ರದಾಯಿಕ ವ್ಯವಸ್ಥೆಯಲ್ಲಿ ವಿದ್ವತ್ ಪಡೆದಿರಬೇಕು. ಕಂಪ್ಯೂಟರ್ ಅಪ್ಲಿಕೇಷನ್‌ನಲ್ಲಿ ಪದವೀಧರರು ಅಥವಾ ಸ್ನಾತಕೋತ್ತರ ಪದವೀಧರರಿಗೆ ಆದ್ಯತೆ ನೀಡಲಾಗುವುದು. |

ಉದ್ದೇಶಿತ:

| ಕ್ರಮ ಸಂಖ್ಯೆ | ಹೆಸರು, ಪದನಾಮ, ವೇತನ ಶ್ರೇಣಿ | ಮಂಜೂರಾದ ಹುದ್ದೆಗಳು | ನೇಮಕಾತಿ ವಿಧಾನ | ಕನಿಷ್ಠ ಅರ್ಹತೆ |
|---|---|---|---|---|
| 1 | ಕಂಪ್ಯೂಟರ್ ಪ್ರೋಗ್ರಾಮರ್ ರೂ.83700–155200 | 01 | ನೇರ ನೇಮಕಾತಿ | 1. ಮಾನ್ಯತೆ ಹೊಂದಿರುವ ವಿಶ್ವವಿದ್ಯಾಲಯದಿಂದ ಇಂಜಿನಿಯರಿಂಗ್‌ನಲ್ಲಿ ಸ್ನಾತಕೋತ್ತರ ಪದವಿ ಅಥವಾ ತಂತ್ರಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಪಡೆದಿರಬೇಕು;<br>2. ಕಂಪ್ಯೂಟರ್ ವಿಜ್ಞಾನವನ್ನು ಒಂದು ವಿಷಯವನ್ನಾಗಿ ಅಧ್ಯಯನ ಮಾಡಿರಬೇಕು;<br>3. ಮಾನ್ಯತೆ ಹೊಂದಿರುವ ವಿಶ್ವವಿದ್ಯಾಲಯದಿಂದ ಸಂಸ್ಕೃತದಲ್ಲಿ ಯಾವುದೇ ಕೋರ್ಸ್ ಪೂರ್ಣಗೊಳಿಸಿರಬೇಕು.<br>4. ಕನಿಷ್ಠ 3 ವರ್ಷಗಳ ಸಂಬಂಧಪಟ್ಟ ಅನುಭವವನ್ನು ಹೊಂದಿರಬೇಕು |

ಪ್ರಸ್ತುತ ಅಸ್ತಿತ್ವದಲ್ಲಿರುವುದು:

| ಕ್ರಮ ಸಂಖ್ಯೆ | ಹೆಸರು, ಪದನಾಮ, ವೇತನ ಶ್ರೇಣಿ | ಮಂಜೂರಾದ ಹುದ್ದೆಗಳು | ನೇಮಕಾತಿ ವಿಧಾನ | ಕನಿಷ್ಠ ಅರ್ಹತೆ |
|---|---|---|---|---|
| 1 | ಶೀಘ್ರಲಿಪಿಗಾರ ರೂ.8000-14800 | 01 | ನೇರ ನೇಮಕಾತಿ ಮೂಲಕ | ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು ಮತ್ತು ಎಸ್.ಎಸ್.ಎಲ್.ಸಿ. ಯಲ್ಲಿ ಸಂಸ್ಕೃತ ಭಾಷೆಯನ್ನು ಅಧ್ಯಯನ ಮಾಡಿರಬೇಕು. ಕರ್ನಾಟಕ ಮಾಧ್ಯಮಿಕ ಶಿಕ್ಷಣ ಪರೀಕ್ಷಾ ಮಂಡಳಿಯಿಂದ ನೀಡಲಾಗುವ ವಾಣಿಜ್ಯ ಅಭ್ಯಾಸದಲ್ಲಿ (ಕನ್ನಡ) ಡಿಪ್ಲೋಮಾ ಪಡೆದಿರಬೇಕು ಮತ್ತು ಸಾಂಪ್ರದಾಯಿಕ ವ್ಯವಸ್ಥೆಯಲ್ಲಿ ನಡೆಸಲಾಗುವ ಇ-ಕಾವ್ಯ ಇದರಲ್ಲಿ ಪ್ರಸಿದ್ಧ ಸಂಸ್ಕೃತ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. |

| ಕ್ರಮ ಸಂಖ್ಯೆ | ಹೆಸರು, ಪದನಾಮ, ವೇತನ ಶ್ರೇಣಿ | ಮಂಜೂರಾದ ಹುದ್ದೆಗಳು | ನೇಮಕಾತಿ ವಿಧಾನ | ಕನಿಷ್ಠ ಅರ್ಹತೆ |
|---|---|---|---|---|
| 1 | ಶೀಘ್ರಲಿಪಿಗಾರ ರೂ.49050-92500 | 01 | ನೇರ ನೇಮಕಾತಿ | 1. ಮಾನ್ಯತೆ ಹೊಂದಿದ ವಿಶ್ವವಿದ್ಯಾಲಯದಿಂದ ಪದವಿ ಪಡೆದಿರಬೇಕು.<br>2. ಮಾನ್ಯತೆ ಹೊಂದಿರುವ ವಿಶ್ವವಿದ್ಯಾಲಯದಿಂದ ಸಂಸ್ಕೃತದಲ್ಲಿ ಯಾವುದೇ ಕೋರ್ಸ್ ಪೂರ್ಣಗೊಳಿಸಿರಬೇಕು.<br>3. ಕಂಪ್ಯೂಟರ್ ವಿಜ್ಞಾನವನ್ನು ಒಂದು ವಿಷಯವನ್ನಾಗಿ ಅಧ್ಯಯನ ಮಾಡಿರಬೇಕು. |

ಈ ಮೇಲ್ಕಂಡಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, ಅನುಮೋದನೆ ಪಡೆಯಲು ಸಭೆಯು ತೀರ್ಮಾನಿಸಿತು.

**ವಿಷಯ 10**

ವೃಂದ ಮತ್ತು ನೇಮಕಾತಿ ಪರಿನಿಯಮದಲ್ಲಿಯಿರುವ ಕಂಪ್ಯೂಟರ್ ಪ್ರೋಗ್ರಾಮರ್, ಶೀಘ್ರ ಲಿಪಿಗಾರರು ಹಾಗೂ ಕುಲಪತಿಗಳ ಆಪ್ತ ಕಾರ್ಯದರ್ಶಿ ಈ 03 ಹುದ್ದೆಗಳಿಗೆ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಸರ್ಕಾರದ ಅನುಮೋದನೆಗಾಗಿ ಸಲ್ಲಿಸುವ ಬಗೆಗೆ.

**ಟಿಪ್ಪಣಿ**

ವಿಶ್ವವಿದ್ಯಾಲಯದ ಅಭಿವೃದ್ಧಿ ಹಾಗೂ ಆಡಳಿತದ ದೃಷ್ಟಿಯಿಂದ ಕಂಪ್ಯೂಟರ್ ಪ್ರೋಗ್ರಾಮರ್, ಶೀಘ್ರ ಲಿಪಿಗಾರ ಹಾಗೂ ಕುಲಪತಿಗಳ ಆಪ್ತ ಕಾರ್ಯದರ್ಶಿ ಈ ಮೂರು ಹುದ್ದೆಗಳನ್ನು ಸರ್ಕಾರದಿಂದ ಪರಿಷ್ಕರಣೆ ಪರಿನಿಯಮವು ಅನುಮೋದನೆಯಾದ ನಂತರ ಸದರಿ ಹುದ್ದೆಗಳನ್ನು ನೇರ ನೇಮಕಾತಿಯ ಮೂಲಕ ಭರ್ತಿ ಮಾಡಲು ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ.

**ನಿರ್ಣಯ**

ಸರ್ಕಾರದಿಂದ ಪರಿಷ್ಕರಣೆ ಪರಿನಿಯಮವು ಅನುಮೋದನೆಯಾದ ನಂತರ ಸದರಿ ಹುದ್ದೆಗಳನ್ನು ನೇರ ನೇಮಕಾತಿಯ ಮೂಲಕ ಭರ್ತಿ ಮಾಡಲು ಸಭೆಯು ಅನುಮೋದನೆ ನೀಡಿತು.

**ವಿಷಯ 11**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ SCSP/TSP ಅನುದಾನದ ಕ್ರಿಯಾ ಯೋಜನೆಯಲ್ಲಿ ಸಂಸ್ಕೃತ ಡ್ಯಾಕ್ಯುಮೆಂಟರಿ ಸಿದ್ಧಪಡಿಸಲು **Expression of Interest(REOI)** ಮುಖಾಂತರ ವಿವಿಧ ಕಂಪನಿಗಳಿಂದ ಅರ್ಜಿ ಆಹ್ವಾನಿಸಿರುವ ಬಗ್ಗೆ.

**ಟಿಪ್ಪಣಿ**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ SCSP/TSP ಅನುದಾನದ ಕ್ರಿಯಾ ಯೋಜನೆಯಲ್ಲಿ ಸಂಸ್ಕೃತ ಡ್ಯಾಕ್ಯುಮೆಂಟರಿ ಸಿದ್ಧಪಡಿಸಲು Expression of Interest(REOI) ಅರ್ಜಿ ಆಹ್ವಾನಿಸಲಾಗಿದ್ದು ಬಂದಂತಹ ಅರ್ಜಿಗಳ ಪ್ರಕ್ರಿಯೆಗಳನ್ನು ನಡೆಸಲು ಸಭೆಯ ಮುಂದೆ ಮಂಡಿಸಿದೆ.

**ನಿರ್ಣಯ**

ನಿಯಾಮಾನುಸಾರ ಕ್ರಮ ಕೈಗೊಳ್ಳಲು ಸಭೆಯು ಅನುಮೋದಿಸಿತು.

ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿತವಾಗುವ ಇತರೆ ವಿಷಯಗಳು

**ವಿಷಯ 01**

ಬಯೋಮೆಟ್ರಿಕ್ ಹಾಜರಾತಿಗೆ **'Face Recognition And Finger Biometric Attendence System'** ಅಳವಡಿಸಲು ಅನುಮೋದನೆಗಾಗಿ ಸಲ್ಲಿಸಿದೆ.

**ಟಿಪ್ಪಣಿ**

ಹಾಲಿಯಿರುವ ಬಯೋಮೆಟ್ರಿಕ್ ಹಾಜರಾತಿಗೆ 'Face Recognition And Finger Biometric Attendence System' ಅಳವಡಿಸಲು ಅನುಮತಿಗಾಗಿ ಹಾಗೂ ಇದರ ಖರೀದಿಗೆ ನಿಯಾಮಾನುಸಾರ ಪ್ರಕ್ರಿಯೆಗಳನ್ನು ನಡೆಸಲು

| | |
|---|---|
| | ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿತು. |
| ನಿರ್ಣಯ | ಸಭೆಯು ಅನುಮೋದಿಸಿತು. |
| ವಿಷಯ 02 | ನೂತನವಾಗಿ ನಿರ್ಮಾಣಗೊಂಡಿರುವ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ತಿಪ್ಪಸಂದ್ರ ಕ್ಯಾಂಪಸ್‌ಗೆ ಕೆಲವು ವಿಭಾಗಗಳು ಸ್ಥಳಾಂತರವಾಗುತ್ತಿರುವುದರಿಂದ ಮೂಲಭೂತ ಸೌಕರ್ಯಗಳಿಗಾಗಿ ಸರ್ಕಾರಕ್ಕೆ ಬಜೆಟ್ ಸಲ್ಲಿಸುವ ಬಗ್ಗೆ. |
| ಟಿಪ್ಪಣಿ | ನೂತನವಾಗಿ ನಿರ್ಮಾಣಗೊಂಡಿರುವ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ತಿಪ್ಪಸಂದ್ರ ಕ್ಯಾಂಪಸ್‌ಗೆ ಕೆಲವು ವಿಭಾಗಗಳು ಸ್ಥಳಾಂತರವಾಗುತ್ತಿರುವುದರಿಂದ ಮೂಲಭೂತ ಸೌಕರ್ಯಗಳಿಗಾಗಿ 2025-26ನೇ ಸಾಲಿನ ಮಧ್ಯಂತರ ಬಜೆಟ್‌ಗೆ ಹಾಗೂ 2026-27ನೇ ಸಾಲಿನ ಬಜೆಟ್‌ಗೆ ವಿವರವಾಗಿ ಪ್ರಸ್ತಾವನೆಯನ್ನು ತಯಾರಿಸಿ ಸರ್ಕಾರಕ್ಕೆ ಸಲ್ಲಿಸಲು ಅನುಮೋದನೆಗಾಗಿ ಸಲ್ಲಿಸಿದೆ. |
| ನಿರ್ಣಯ . | ಸಭೆಯು ಅನುಮೋದಿಸಿತು. |

ಮೇಲ್ಕಂಡ ವಿಷಯಗಳನ್ನು ಹೊರತುಪಡಿಸಿ ಇತರೆ ವಿಷಯಗಳು ಚರ್ಚೆಗೆ ಬಾರದ ಕಾರಣ ಮಾನ್ಯ ಅಧ್ಯಕ್ಷರ ಅಪ್ಪಣೆಯೊಂದಿಗೆ ಹಾಜರಿದ್ದ ಎಲ್ಲಾ ಸದಸ್ಯರಗಳಿಗೂ ವಂದಿಸಿ ಸಭೆಯು ಮುಕ್ತಾಯಗೊಂಡಿತು.

Shruthi.I
(ಶೃತಿ ಐ)
**ಹಣಕಾಸು ಅಧಿಕಾರಿಗಳು**
ಸದಸ್ಯ ಕಾರ್ಯದರ್ಶಿ

(ಡಾ. ಎಸ್. ಅಹಲ್ಯ)
**ಕುಲಪತಿಗಳು**
ಅಧ್ಯಕ್ಷರು

ದಿನಾಂಕ: **13.10.2025**